ಗಾಯಕರನ್ನೊಳಗೊಂಡ (ಬಿ.ಕೆ. ಸುಮಿತ್ರಾ, ಕಸ್ತೂರಿ ಶಂಕರ್, ಪುತ್ತೂರು ನರಸಿಂಹನಾಯಕ್, ಮಂಜುಳಾ ಗುರುರಾಜ್, ಸಂಗೀತಾ ಕಟ್ಟಿ, ರಾಜೇಶ್ ಕೃಷ್ಣನ್, ಬಿ.ಆರ್. ಛಾಯಾ, ಚಂದ್ರಿಕಾ ಗುರುರಾಜ್..ಹೀಗೆ ಒಟ್ಟು 59 ಖ್ಯಾತ ಗಾಯಕಗಾಯಕಿಯರು) ಹಾಡು 'ನಾಡಗೀತೆ ಜೈ ಭಾರತ ಜನನಿಯ ತನುಜಾತೆ'ಯನ್ನು ಬಹಳ ವಿಭಿನ್ನವಾಗಿ ಪ್ರಸ್ತುತ ಪಡಿಸಿದ್ದೇವೆ. ಇದರಲ್ಲಿ ಈಗ ಇರುವ ನಾಲ್ಕು ತಲೆಮಾರುಗಳ ಸಂಗೀತಗಾರ (1962ರಿಂದ 2016ರವರೆಗೆ) ರನ್ನು ತೊಡಗಿಸಿಕೊಂಡಿದ್ದೇನೆ. ಇದು ಕನ್ನಡದ ಸಂಗೀತ ಇತಿಹಾಸದಲ್ಲೇ ಮೊದಲನೆ ಪ್ರಯತ್ನ. ಇದರ ನಿರ್ಮಾಣಕ್ಕೆ ಕರ್ನಾಟಕ ರಕ್ಷಣಾ ವೇದಿಕೆ ಮತ್ತು ಗಂಗಾ ಪ್ರಕಾಶನ ಸಹಕಾರ ನೀಡಿದೆ.

ನಾಡಗೀತೆಯನ್ನು ಸಂಪೂರ್ಣವಾಗಿ ಹಿಂದೂಸ್ತಾನಿ ರಾಗಗಳಾದ ಭೀಮಪಲಾಸಿ, ಕಲ್ಯಾಣಿ ಹಾಗೂ ಮಿಶ್ರ ರಾಗಗಳನ್ನು ಬಳಸಲಾಗಿದೆ. ಹಾಡನ್ನು 'ನಿಧಾನ ನಡೆ'ಯಲ್ಲಿ ಹಾಡಲಾಗಿದೆ. ಮಕ್ಕಳಿಗೆ ಗೀತೆಯ ಸಂಪೂರ್ಣ ಅರ್ಥ ಆಗುವ ಹಾಗೆ ಗಾಯನದಲ್ಲಿ ಕೇಳಿಸಲಾಗುತ್ತದೆ. ಇದೇ ಈ ಹಾಡಿನ ವಿಶೇಷತೆ. ಇದನ್ನು ಗಿನ್ನೆಸ್ ಎತ್ತರಕ್ಕೆ ಒಯ್ಯುವ ಕನಸು ಕಂಡಿದ್ದು, ಯಶ ಸಾಧಿಸಬಹುದು ಎಂಬ ವಿಶ್ವಾಸ ನನಗಿದೆ.

*ಹಾಡೋದು ಅಂದರೆ ಪ್ರೀತಿ, ಭಾವನೆಗಳನ್ನು ಅಭಿವ್ಯಕ್ತಿಸೋದು ಎಂಬುದೇ ಎಲ್ಲ ಸಂಗೀತಗಾರರ ಅಭಿಪ್ರಾಯ; ನೀವು ಏನು ಹೇಳುತ್ತೀರಿ?*

ಇದು ಖಂಡಿತಾ ಒಪ್ಪುವಂಥ ಮಾತೇ. ಸಂಗೀತಕ್ಕೆ ಅಗಾಧವಾದ ಶಕ್ತಿ ಇದೆ. ಸಂಗೀತದ ಮೂಲಕ ಪ್ರೀತಿ, ಖುಷಿ, ಬೇಸರ, ನೋವು ಎಲ್ಲವನ್ನೂ ಅಭಿವ್ಯಕ್ತಿಸಬಹುದು. ಭಾವನೆಗಳ ಜಗತ್ತನ್ನೇ ಗೆಲ್ಲಬಹುದು. ನನಗೆ ಬಹಳ ಒತ್ತಡ (ಸ್ಟ್ರೆಸ್) ಉಂಟಾದಾಗ ಪಿಯಾನೊವನ್ನೋ ಅಥವಾ ಕೀಬೋರ್ಡ್ ಅನ್ನೋ ಕೈಗೆತ್ತಿಕೊಂಡು ನುಡಿಸಲಾರಂಭಿಸುತ್ತೇನೆ. ಮನಬಿಚ್ಚಿ ಹಾಡಲು ತೊಡಗುತ್ತೇನೆ. ತಕ್ಷಣ ಮನಸ್ಸು ನಿರಾಳವಾಗುತ್ತದೆ. ಇದು ನನಗೆ ಆದ ಅನುಭವ. ಅಲ್ಲದೆ ಸಂಗೀತದಿಂದ ಅಳಿಸಿ, ನಗಿಸಿ, ನೋವು ಮರೆಸಬಹುದು. ಹಾಡುಗಾರರ ಮತ್ತು ಕೇಳುಗರ ನಡುವಿನ ಭಾವನಾತ್ಮಕ ಸಂಬಂಧ ಬೆಸೆಯುವುದು ಕೂಡ ಉತ್ತಮ ಸಂಗೀತದಿಂದಲೇ ಎಂಬುದು ನನ್ನ ಭಾವನೆ. ಇದೇ ಕಾರಣಕ್ಕೆ ಸಂಗೀತದ ಎಲ್ಲ ಪ್ರಕಾರಗಳನ್ನೂ ಇಷ್ಟಪಡ್ತೇನೆ. ಭಾವಗೀತೆ ಹಾಡುವಾಗ ಶಾಂತಿ ಸಿಕ್ಕರೆ, ಹಳೆಯ ಸಿನಿಮಾ ಹಾಡು ಖುಷಿ ಕೊಡುತ್ತದೆ. ಮೌಲ್ಯ ಇದ್ದರೆ ಪಾಶ್ಚಾತ್ಯ ಸಂಗೀತವೂ ಸೊಗಸೇ. ಸಂಗೀತಕ್ಕೆ ಯಾವುದೇ ಮಿತಿ, ಗಡಿ ಇಲ್ಲ. ಸಾಗರದಾಚೆಗೂ ಸಂಗೀತಕ್ಕೆ ಬಾಂಧವ್ಯ ಬೆಸೆಯುವ ಶಕ್ತಿ ಇದೆ.

*ಸುಗಮ ಸಂಗೀತದಲ್ಲಿ ಗುರುತಿಸಿಕೊಂಡಿರುವ ನೀವು ಸ್ವಲ್ಪಮಟ್ಟಿನ ಶಾಸ್ತ್ರೀಯ ಸಂಗೀತವನ್ನೂ ಕಲಿತಿದ್ದೀರಿ. ಹಿಂದೂಸ್ತಾನಿ ಸಂಗೀತ ಕಲಿತದ್ದು ಈಗ ಸಹಾಯಕ್ಕೆ ಬರುತ್ತಿದೆಯಾ?*

ಚಿಕ್ಕವಳಿರುವಾಗ ಶಾಸ್ತ್ರೀಯ ಸಂಗೀತ ಕಲಿತಿಲ್ಲ. ಆದರೆ ನನ್ನ ತಾಯಿ ಎಚ್.ಜಿ. ಸುನಂದಾ ಶಾಸ್ತ್ರೀಯ ಸಂಗೀತ ಕಲಿತಿದ್ದರು. ಅವರು ಹಾಡುವುದು ಕೇಳುತ್ತಿದ್ದೆ.



ಬೆಂಗಳೂರಿಗೆ ಬಂದ ಮೇಲೆ ಪಂ. ಶೇಷಾದ್ರಿ ಗವಾಯಿ ಅವರ ಬಳಿ ಸುಮಾರು ಆರು ವರ್ಷ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಲಿತೆ. ಈಗ ಕನ್ನಡ, ತುಳು, ತೆಲುಗು, ತಮಿಳು, ಹಿಂದಿ, ಕೊಂಕಣಿ, ಕೊಡವ, ಲಂಬಾಣಿ.. ಹೀಗೆ ಎಂಟು ಭಾಷೆಗಳಲ್ಲಿ ಭಾವಗೀತೆ, ಭಕ್ತಿಗೀತೆ, ಜಾನಪದ ಗೀತೆ, ಚಿತ್ರಗೀತೆಗಳನ್ನು ಹಾಡುವಾಗ ಶಾಸ್ತ್ರೀಯ ಸಂಗೀತದ ಜ್ಞಾನ ಬಹಳ ಸಹಾಯಕ್ಕೆ ಬರುತ್ತಿದೆ.

*ನಿಮ್ಮ 'ಸ್ವರ ಸನ್ನಿಧಿ ಟ್ರಸ್ಟ್' ಬಗ್ಗೆ?*

'ಸ್ವರ ಸನ್ನಿಧಿ ಟ್ರಸ್ಟ್' ಸಂಗೀತ, ನೃತ್ಯ, ಸಾಹಿತ್ಯ.. ಹೀಗೆ ಮೂರು ಕ್ಷೇತ್ರಗಳಿಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಮೀಸಲಾದ ಸಂಸ್ಥೆ. ಇದನ್ನು ಆರಂಭಿಸಿ ಹತ್ತು ವರ್ಷಗಳಾಗಿವೆ. ಸದ್ಯ ದಶಮಾನೋತ್ಸವ ಹೊಸ್ತಿಲಲ್ಲಿರುವ ಈ ಟ್ರಸ್ಟ್ ವತಿಯಿಂದ ಅನೇಕ ಕಾರ್ಯಕ್ರಮಗಳನ್ನು ಮಕ್ಕಳಿಗಾಗಿ ಮಾಡುವ ಯೋಚನೆ ಇದೆ. ಶಾಲಾ ಮಕ್ಕಳಲ್ಲಿ ಸುಗಮ ಸಂಗೀತದ ಅಭಿರುಚಿ ಹೆಚ್ಚಿಸಬೇಕು. ಮಕ್ಕಳಿಗಾಗಿ ಕವಿಗೋಷ್ಠಿ ಏರ್ಪಡಿಸುವುದು, ದೇಶಭಕ್ತಿ ಗೀತೆ ಹಾಡಿಸುವುದು, ಉದಯೋನ್ಮುಖ ಸಂಗೀತ ಪ್ರತಿಭೆಗಳಿಗೆ ವೇದಿಕೆ ಒದಗಿಸಿಕೊಡುವುದು, ಗೀತೋತ್ಸವ ನಡೆಸುವುದು, ಪ್ರಶಸ್ತಿ ಕೊಡುವುದು, ಸಂಗೀತದಲ್ಲಿ ಅಭಿರುಚಿ ಇರುವ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವುದು, ಮಕ್ಕಳಿಗಾಗಿ ಮಕ್ಕಳಿಂದಲೇ ಹಾಡಿಸಿದ ಆಲ್ಬಂ ಹೊರತರುವುದು.. ಇಂಥ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನ ನಡೆಸಿದ್ದೇನೆ.

*ವೃತ್ತಿಯಲ್ಲಿ ದಂತ ವೈದ್ಯೆಯಾದ ನೀವು, ನಿಮ್ಮ ಪ್ರವೃತ್ತಿಯಾಗಿರುವ ಸಂಗೀತದ ಕಡೆಗೇ ಹೆಚ್ಚಿನ ಒಲವು ತೋರಿದಂತಿದೆ. ನೀವೇನು ಹೇಳುತ್ತೀರಿ?*

ದಂತ ವೈದ್ಯಕೀಯದಲ್ಲಿ, ವೈದ್ಯವೃತ್ತಿಯಲ್ಲಿ ಆಸಕ್ತಿ ಎಂದಿಗೂ ಇದೆ. ಈಗಲೂ ಬೆಂಗಳೂರಿನ ನವರಂಗ್ ಹತ್ತಿರ ಡೆಂಟಲ್ ಕ್ಲಿನಿಕ್ ಇದ್ದು, ನನ್ನ ಸ್ನೇಹಿತೆ (ದಂತ ವೈದ್ಯೆ) ಜತೆ ಕ್ಲಿನಿಕ್‌ನಲ್ಲಿ ಕೆಲಸ ಮಾಡ್ತೀನಿ. ವಾರಕ್ಕೆ ಒಂದು ದಿನವೋ ಎರಡು ದಿನವೋ ಅಲ್ಲಿ ಹೋಗಿ ಪೇಶೆಂಟ್‌ಗಳನ್ನು ನೋಡ್ತೀನಿ. ದಂತ ವೈದ್ಯಕೀಯದ ಹೊಸ ಬೆಳವಣಿಗೆ (ಲೇಟೆಸ್ಟ್ ಅಪ್‌ಡೇಟ್ಸ್) ಬಗ್ಗೆ ಅಧ್ಯಯನ ಮಾಡ್ತೀನಿ. ಆದರೆ ಸಂಗೀತಕ್ಕಾಗಿ, ಹಿನ್ನೆಲೆ ಗಾಯನ, ನಿರ್ದೇಶನ ಮಾಡುವುದಕ್ಕೆ ಹೆಚ್ಚಿನ ಸಮಯ ಹೋಗುವುದರಿಂದ ಎರಡನ್ನೂ ನಿಭಾಯಿಸಿಕೊಂಡು ಹೋಗುವುದು ಸ್ವಲ್ಪ ಕಷ್ಟವಾಗುತ್ತಿದೆ ಅಷ್ಟೆ.

*ಸಾಮಾನ್ಯವಾಗಿ ಯಾರೂ ಹೆಸರಿನೊಂದಿಗೆ ಮಲೆನಾಡು, ಬಯಲು ಸೀಮೆ, ಕರಾವಳಿ ಎಂಬ ವಿಶೇಷಣ ಇಟ್ಟುಕೊಳ್ಳುವುದಿಲ್ಲ. ಎಲ್ಲರೂ ಸರ್‌ನೇಮ್, ಮಹಿಳೆಯಾದರೆ ಪತಿ ಹೆಸರು, ತಂದೆಯ ಹೆಸರು ಇಟ್ಟುಕೊಳ್ಳುವುದಿದೆ. ಆದರೆ ನಿಮ್ಮ ಹೆಸರಿನೊಂದಿಗೆ ಮಲ್ನಾಡ್ ಸೇರಿಕೊಂಡಿದೆ. ಇದು ಮಲೆನಾಡಿನ ಬಗೆಗಿನ ಅಭಿಮಾನವೇ ಅಥವಾ ಬೇರೆ ಏನಾದರೂ ಕಾರಣವಿದೆಯೇ?*

ಹೌದು, ನನ್ನ ಹೆಸರಿನಲ್ಲಿ ಮಲ್ನಾಡ್ ಪದ ಸೇರಿಕೊಂಡಿದೆ. ನಮ್ಮೂರಲ್ಲಿ ಸರ್‌ನೇಮ್ ಇಡುವ ಪದ್ಧತಿ ಇಲ್ಲ. ನಾನು ಮೂಲತಃ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯವಳು. ಸಹಜವಾಗಿಯೇ ಇಲ್ಲಿನ ಪ್ರಕೃತಿ ಸೌಂದರ್ಯದ ಮೇಲೆ ವಿಶೇಷ ಅಭಿಮಾನ. ಅದಾಗಿ ನಾವು ಕೆಲ ವರ್ಷ ಕನಕಪುರದಲ್ಲಿದ್ದೆವು. ಆಗ ನಾನು ಪಿಯುಸಿ ಓದುತ್ತಿದ್ದೆ. ಅಲ್ಲಿ ಒಮ್ಮೆ ಒಂದು ಭಕ್ತಿಗೀತೆ ಕ್ಯಾಸೆಟ್‌ಗೆ ಹಾಡಬೇಕಾದ ಪ್ರಸಂಗ ಬಂತು. 'ಕಣಿವೆ ಕಬ್ಬಾಳಮ್ಮ' (ಮೊತ್ತ ಮೊದಲ ಕ್ಯಾಸೆಟ್)ಕ್ಕಾಗಿ ಸುಗಮ ಸಂಗೀತಗಾರರಾದ ಚಿಕ್ಕಮರಿಗೌಡರು ನನ್ನಲ್ಲಿ ಹಾಡಲು ಹೇಳಿದ್ದರು. ಅವರು ನನ್ನ ಸರ್‌ನೇಮ್ ಏನು ಎಂದು ಕೇಳಿದರು. ಆಗ ಬರೀ ಶಮಿತಾ ಎಂದು ಇರುವ ಬದಲಿಗೆ 'ಮಲ್ನಾಡ್' ಎಂದು ಸೇರಿಸು ಎಂದರು. ಹಾಗೆ ಮಲ್ನಾಡ್ ಎಂಬ ವಿಶೇಷಣ ಹೆಸರಿನೊಂದಿಗೆ ಅದಾಗಿ ಅದೇ ಬಂದಿದ್ದು. ಈಗ ಅದೇ ದೊಡ್ಡ ಐಡೆಂಟಿಟಿ ಆಗಿದೆ. ■